ಅಸಲು ದಾವೆ ನಂ.60/2015

ಡಿ.ಡಬ್ಲೂಃ1- ಶಂಕರ್ ರೆಡ್ಡಿ ಬಿನ್ ಚಿಕ್ಕ ತಿಪ್ಪಾರೆಡ್ಡಿ

ದಿನಾಂಕಃ 02/04/2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ವಾದಿಯರ ಪರವಾಗಿ ಶ್ರೀ ಎಸ್ ಆರ್ ವಕೀಲರಿಂದ**

10. ನನ್ನ ಮತ್ತು 1, 2 ವಾದಿಯರು ಹಾಗೂ 5, 6 ನೇ ಪ್ರತಿವಾದಿಯರ ಮಧ್ಯ ಈ ದಾವೆ ದಾಖಲಾಗಿರುವುದಕ್ಕೆ ಮನಸ್ತಾಪ ಇರುತ್ತದೆ. ದಾವೆ ದಾಖಲಾಗುವುದಕ್ಕೂ ಮುಂಚೆ ನಮ್ಮ ಮಧ್ಯ ಯಾವುದೇ ಮನಸ್ತಾಪ ಇರಲಿಲ್ಲ. ಈ ದಾವೆಯಲ್ಲಿ ನಾವು ಸಲ್ಲಿಸಿರುವ ನಮ್ಮ ಲಿಖಿತ ಹೇಳಿಕೆಯನ್ನು ನನ್ನ ಮಾಹಿತಿಯ ಮೇರೆಗೆ ತಯಾರಿಸಲಾಗಿರುತ್ತದೆ. ಅದೇ ರೀತಿ 5 ಮತ್ತು 6 ನೇ ಪ್ರತಿವಾದಿಯರನ್ನೂ ಸಹ ನಾನೇ ವಕೀಲರ ಹತ್ತಿರ ಕರೆದುಕೊಂಡು ಹೋಗಿ ಅವರ ಲಿಖಿತ ಹೇಳಿಕೆಯನ್ನು ತಯಾರಿಸಿ ಅವರ ಪರವಾಗಿ ಈ ದಾವೆಯಲ್ಲಿ ದಾಖಲಿಸಿರುತ್ತೇನೆ ಎಂದರೆ ಸರಿ.

11. ನಿಡಿ-1 ವಿಲ್ ಪತ್ರವನ್ನು ನಮ್ಮ ತಂದೆಯು ದಿನಾಂಕ 01.08.2008 ರಂದು ಬರೆದಿರುತ್ತಾರೆ. ಸದರಿ ದಾಖಲೆಯನ್ನು ಯಾರು ತಯಾರಿಸಿರುತ್ತಾರೆ ಎಂದು ನನಗಾಗಲೀ ಅಥವಾ ಸಹೋದರರಿಗಾಗಲಿ ಗೊತ್ತಿರುವುದಿಲ್ಲ ಕಾರಣ ಅದನ್ನು ತಯಾರಿಸುವಾಗ ನಾವು ಹಾಜರು ಇರಲಿಲ್ಲ ಮತ್ತು ಅದು ನಮಗೆ ನಮ್ಮ ತಂದೆ ಮರಣ ಹೊಂದಿದ ನಂತರ ಸಿಕ್ಕಿರುತ್ತದೆ. ನಮ್ಮ ತಂದೆಯು ದಿನಾಂಕ 14.02.2015 ರಂದು ಮರಣ ಹೊಂದಿರುತ್ತಾರೆ. 2008 ರಲ್ಲಿ ನಿಡಿ-1 ವಿಲ್ ಪತ್ರ ಬರೆದಾದ ನಂತರ ನಮ್ಮ ತಂದೆಯು 2015 ರಲ್ಲಿ ಮರಣ ಹೊಂದುವವರೆಗೂ ಸದರಿ ದಾಖಲೆಯ ಬೆಗ್ಗೆ ನಮಗೆ ಯಾವುದೇ ಮಾಹಿತಿ ಇರಲಿಲ್ಲ. ಆ ಸಮಯದಲ್ಲಿ ಅದು ನಮ್ಮ ತಂದೆಯ ಅಭಿರಕ್ಷೆಯಲ್ಲಿ ಇತ್ತು. ಸದರಿ ವಿಲ್ ನ ವಿಚಾರಗಳನ್ನು ನಾವು ನಂತರ ಓದಿ ತಿಳಿದುಕೊಂಡಿರುತ್ತೇವೆ. ಸದರಿ ವಿಲ್ ಕೇವಲ ದಾವಾ ಐಟಂ ನಂ.3 ಸ್ವತ್ತಿಗೆ ಸಂಬಂಧಿಸಿರುತ್ತದೆ ಮತ್ತು ಅದರಲ್ಲಿ ಬೇರೆ ಯಾವುದೇ ಸ್ವತ್ತುಗಳು ಇರುವುದಿಲ್ಲ.

12. ನನ್ನ ಮದುವೆಯು ಎಂ.ಕೊತ್ತುತ್ತಾರು ಗ್ರಾಮದಲ್ಲಿ ಆಗಿರುತ್ತದೆ ಎಂದರೆ ಸರಿ. ನನ್ನ ಹೆಂಡತಿಯ ಹೆಸರು ಅನಸೂಯಮ್ಮ ಎಂದರೆ ಸರಿ. ನನಗೆ ಎಂ.ಕೊತ್ತೂರು ಗ್ರಾಮದ ಚೆಂಗಲರಾಯರೆಡ್ಡಿ ಬಿನ್ ಗುರುವಾ ರೆಡ್ಡಿ ರವರ ಪರಿಚಯವಿರುತ್ತದೆ. ಸದರಿ ಚೆಂಗಲರಾಯರೆಡ್ಡಿ ಮತ್ತು ರಾಮಕೃಷ್ಣ ರೆಡ್ಡಿ ರವರು ನಿಡಿ-1 ಪತ್ರಕ್ಕೆ ಸಾಕ್ಷಿದಾರರಾಗಿರುತ್ತಾರೆ. ಸದರಿ ಚೆಂಗಲರಾಯರೆಡ್ಡಿ ರವರು ನನ್ನ ಹೆಂಡತಿ ಸಹೋದರ ಆಗಿರುತ್ತಾರೆ ಎಂದರೆ ಸರಿ. ಅದೇ ರೀತಿ ಸದರಿ ರಾಮಕೃಷ್ಣ ರೆಡ್ಡಿರವರೂ ಸಹ ನನ್ನ ಹೆಂಡತಿಗೆ ಸಂಬಂಧಿಕರು ಆಗಬೇಕು ಎಂದರೆ ಸರಿಯಲ್ಲ. ನನ್ನ ಹೆಂಡತಿ, ಚೆಂಗಲರಾಯರೆಡ್ಡಿ ಮತ್ತು ರಾಮಕೃಷ್ಣ ರೆಡ್ಡಿ ರವರು ಒಂದೇ ಊರು ಅಂದರೆ ಎಂ ಕೊತ್ತುತ್ತಾರು ಗ್ರಾಮದವರು ಎಂದರೆ ಸರಿ.

13. ನಮ್ಮ ತಂದೆಯು ಸಾಯುವುದಕ್ಕೂ ಮುಂಚೆ ಸುಮಾರು 1.5 ವರ್ಷ ಕಾಲ ಕಾಯಿಲೆಯಿಂದ ಬಳಲುತ್ತಿದ್ದರು ಆದರೆ ಓಡಾಡಿಕೊಂಡು ಇದ್ದರು ಮತ್ತು ಕೊನೆಯ 6 ತಿಂಗಳ ಕಾಲ ಅವರು ಹಾಸಿಗೆಯಲ್ಲಿ ಮಲಗಿಕೊಂಡೇ ಇದ್ದರು. ಅವರಿಗೆ ಯಾವ ದಿನಾಂಕದಿಂದ ಕಾಯಿಲೆ ಇತ್ತು ಮತ್ತು ಅವರು ಯಾವ ದಿನಾಂಕದಿಂದ ಹಾಸಿಗೆಯಲ್ಲಿ ಮಲಗಿಕೊಂಡೇ ಇದ್ದರು ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ನಮ್ಮ ತಂದೆಯು ಸಾಯುವಾಗ ಅವರಿಗೆ 100 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿತ್ತು. ನಿಡಿ-1 ದಾಖಲೆ ಬರೆಯುವಾಗ ನಮ್ಮ ತಂದೆಗೆ ಎಷ್ಟು ವರ್ಷ ವಯಸ್ಸು ಆಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ ಆದರೆ ದಾಖಲೆಯಲ್ಲಿ ಅವರಿಗೆ 76 ವರ್ಷ ವಯಸ್ಸು ಆಗಿತ್ತು ಎಂದು ಬರೆಯಲಾಗಿರುತ್ತದೆ. ನಮ್ಮ ತಂದೆಯ ಜನನ ಪ್ರಮಾಣ ಪತ್ರ ನಮ್ಮ ಹತ್ತಿರ ಇರುವುದಿಲ್ಲ. ನಮ್ಮ ತಂದೆಯು ಸಾಯುವುದಕ್ಕೂ ಮುಂಚೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರು ಆದರೆ ನಮ್ಮ ಹತ್ತಿರ ಈ ಬಗ್ಗೆ ದಾಖಲೆಗಳು ಇರುವುದಿಲ್ಲ. ನಿಡಿ-1 ದಾಖಲೆ ಬರೆಯುವಾಗ ನಮ್ಮ ತಂದೆಯು ಆರೋಗ್ಯವಂತರಾಗಿದ್ದರು ಎಂದು ನಾವು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಅವರ ಕಣ್ಣಿಗೆ ಸರಿಯಾಗಿ ಕಾಣುತ್ತಿರಲಿಲ್ಲ, ಅವರಿಗೆ ರಕ್ತದೊತ್ತಡ ಹೆಚ್ಚಾಗಿ ಇರುತ್ತಿತ್ತು ಮತ್ತು ಕೈ ಕಾಲು ನಡುಗುತ್ತಿದ್ದ ಕಾರಣ ಸಹಿ ಮಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ.

14. 1 ನೇ ವಾದಿಯು ವೆಂಕಟಮ್ಮ ರವರ ವಿರುದ್ಧ ಒಂದು ದಾವೆ ಸಲ್ಲಿಸಿದ್ದರು ಎಂದರೆ ಸರಿ. ಅದೇ ರೀತಿ 1 ನೇ ಪ್ರತಿವಾದಿಯು ವಾದಿಯರ ಮತ್ತು 2 ರಿಂದ 4 ನೇ ಪ್ರತಿವಾದಿಯರ ವಿರುದ್ಧ ವಿಭಾಗಕ್ಕಾಗಿ ಅಸಲು ದಾವೆ ನಂ.252/2008 ವನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ಅಸಲು ದಾವೆ ನಂ.252/2008 ವಿಚಾರಣೆಯಲ್ಲಿರುವಾಗ ಊರಲ್ಲಿ ಪಂಚಾಯ್ತಿ ಮಾಡೋಣ ಎಂದು ಹೇಳಿ 1 ನೇ ಪ್ರತಿವಾದಿಗೆ ದಾವೆಯನ್ನು ಹಿಂಪಡೆದುಕೊಳ್ಳಿ ಎಂದು ಹೇಳಿದ ಮೇರೆಗೆ 1 ನೇ ಪ್ರತಿವಾದಿಯು ಅದನ್ನು ದಿನಾಂಕ 08.08.2008 ರಂದು ಹಿಂಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಮರು ದಿನ ಅಂದರೆ ದಿನಾಂಕ 09.08.2008 ರಂದು ಊರಲ್ಲಿ ಪಂಚಾಯ್ತಿ ನಡೆದಿರುತ್ತದೆ ಎಂದರೆ ಸರಿಯಲ್ಲ. ನನಗೆ ಪಿಡಬ್ಲೂ-2 ಕೃಷ್ಣಾರೆಡ್ಡಿ ರವರು ಗೊತ್ತು. ನಂತರ ದಿನಾಂಕ 09.08.2015 ರಂದು ಇನ್ನೊಂದು ಪಂಚಾಯ್ತಿ ಊರಲ್ಲಿ ನಡೆದಿರುತ್ತದೆ ಎಂದರೆ ಸರಿಯಲ್ಲ. ಕೊನೆಯದಾಗಿ ಪಿಡಬ್ಲೂ-2 ಕೃಷ್ಣಾರೆಡ್ಡಿ ಹಾಗೂ ಇತರರು ಸೇರಿ ಗ್ರಾಮದಲ್ಲಿ ದಿನಾಂಕ 04.07.2023 ರಂದು ನಮ್ಮ ಮತ್ತು ವಾದಿಯರ ಮಧ್ಯ ಪಂಚಾಯ್ತಿ ಮಾಡಿದ್ದು ಪಂಚಾಯ್ತಿಯಲ್ಲಿ ಒಂದು ವಿಭಾಗ ಪತ್ರ ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರಕ್ಕೆ ನಾವು 2 ರಿಂದ 4 ನೇ ಪ್ರತಿವಾದಿಯರನ್ನು ಹೊರತು ಪಡಿಸಿ ಉಳಿದವರೆಲ್ಲರೂ ಸಹಿ

ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹೀಗೆ ವಿಭಾಗ ಪತ್ರ ಬರೆಯಲಾಗಿರುತ್ತದೆ ಮತ್ತು ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ನನಗೆ ಗೊತ್ತು ಎಂದರೆ ಸರಿಯಲ್ಲ.

15. ನಾವು ನಮ್ಮ ಲಿಖಿತ ಹೇಳಿಕೆಯ ಪ್ಯಾರಾ ನಂ.22 ರಲ್ಲಿ ದಾವಾ ಐಟಂ ನಂ.3 ಸ್ವತ್ತು 2 ರಿಂದ 6 ನೇ ಪ್ರತಿವಾದಿಯರ ಸಂಪೂರ್ಣ ಮಾಲಿಕತ್ವದ ಸ್ವತ್ತಾಗಿರುತ್ತದೆ ಎಂದು ನಾವು ಹೇಳಿರುತ್ತೇವೆ ಎಂದರೆ ಸರಿಯಲ್ಲ ಆದರೆ ಕೇವಲ 2 ರಿಂದ 4 ನೇ ಪ್ರತಿವಾದಿಯರ ಸಂಪೂರ್ಣ ಮಾಲಿಕತ್ವದ ಸ್ವತ್ತಾಗಿರುತ್ತದೆ ಎಂದು ಹೇಳಿರುತ್ತೇವೆ. ಎಲ್ಲಾ ದಾವಾ ಸ್ವತ್ತುಗಳಲ್ಲಿ ವಾದಿಯರಿಗೂ ಮತ್ತು ಪ್ರತಿವಾದಿಯರಿಗೆ ಸಮಾನ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ವಾದಿಯರು ಮತ್ತು ಪ್ರತಿವಾದಿಯರೆಲ್ಲರೂ ಆಸ್ತಿಗಳಿಗೆ ಸಂಬಂಧಿಸಿ ಒಟ್ಟು ಕುಟುಂಬದಲ್ಲಿ ವಾಸವಾಗಿರುತ್ತಾರೆ ಮತ್ತು ಕೇವಲ ತಮ್ಮ ತಮ್ಮ ಸಂಸಾರಗಳನ್ನು ಪ್ರತ್ಯೇಕವಾಗಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

16. ಈಗ ದಾವಾ ಐಟಂ ನಂ.3 ಸ್ವತ್ತಿನಲ್ಲಿ ರೇಷ್ಮೆ, ಜೋಳ ಮತ್ತು ಹುಲ್ಲು ಬೆಳೆ ಇರುತ್ತದೆ. ರೇಷ್ಮೆ ಬೆಳೆ ಹೆಚ್ಚು ಪ್ರಮಾಣದಲ್ಲಿ ಇರುತ್ತದೆ. ಸದರಿ ಸ್ವತ್ತಿನಲ್ಲಿ 1 ರಿಂದ 4 ನೇ ಪ್ರತಿವಾದಿಯರು ಮತ್ತು 3 ನೇ ವಾದಿಯು ತಮ್ಮ ಅನುಕೂಲದ ಪ್ರಕಾರ ಒಂದೊಂದು ಪಟ್ಟಿಯಲ್ಲಿ ಪ್ರತ್ಯೇಕವಾಗಿ ಉಳುಮೆ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ ಆದರೆ 2 ರಿಂದ 4 ನೇ ಪ್ರತಿವಾದಿಯರು ಮಾತ್ರ ಮಾಡುತ್ತಿರುತ್ತಾರೆ. ಸದರಿ ಜಮೀನು ಪೂರ್ವ ಪಶ್ಚಿಮ ವಾಗಿರುತ್ತದೆ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)

**1 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ**

**ಕೆಜಿಎಫ್**